‘ವಸ್ತುವಿನಾಚೆಗಿನ ಕಲೆ’ಯ (ವಸ್ತೋತ್ತರ, ಪೋಸ್ಟ್‌ಆಬ್ಜೆಕ್ಟ್) ಚಿತ್ರಕಾರ ಎಂ.ಬಿ. ಪಾಟೀಲ್.

ಆದುದರಿಂದಲೇ ಏನೋ ಇವರಿಗೆ ಪ್ರತಿಷ್ಠಿತ ವೆಂಕಟಪ್ಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಲಲಿತಕಲಾ ಅಕಾಡೆಮಿ ಪ್ರಶಸ್ತಿ ಇತ್ಯಾದಿಗಳು ಸಂದಿರುವುದು ಒಂದು ಸಹಜ ಸಾಧನೆ ಎನ್ನಿಸದು. ಇತ್ತ ಅಸಹಜ ಮಾರ್ಗಿಗೆ ಅಷ್ಟೇ ವಿಕ್ಷಿಪ್ತ ಮನ್ನಣೆಯನ್ನು ದೊರಕಿಸಿಕೊಡುವ ರೂಢಿಯೂ ನಮ್ಮಲ್ಲಿಲ್ಲ. ಆಧುನಿಕ ಕಲೆಗಳ ಎಲ್ಲ ಸಂಗ್ರಹಾಲಯಗಳಿಗೂ ವಸ್ತುಮೀರಿದ ಕಲಾಸೃಷ್ಟಿಗಳನ್ನು ಶೇಖರಿಸಲಾಗದ ಒಂದು ಅಂಗವಿಕಲತೆ ಇದೆ. ಇದಕ್ಕೆ ಬಲಿಯಾದವರಲ್ಲಿ ಎರಡನೆಯವರು ಪಾಟೀಲರಾದರೆ ಮೊದಲನೆಯವರು ಆರ್.ಎಂ. ಹಡಪದ. ‘ಇವರ ಕಲಾತ್ಮಕ ಸಾಧನೆಯನ್ನು ಮಾನ್ಯ ಮಾಡಬಹುದಾದರೂ ಇವರ ಕೃತಿಗಳೆಲ್ಲಿ?’ ಎಂದು ಕೇಳುವ, ಕೇಳಿರುವ ಎಲ್ಲರೂ ಆಧುನಿಕ ಸಂಗ್ರಹಾಲಯಗಳ ಮನಃಸ್ಥಿತಿಯ ಬಂದಿಗಳೇ. ಇದು ನಮ್ಮ ಪರಿಸರದ ಸೋಲು ಹೇಗೋ ಹಾಗೆಯೇ ಪಾಟೀಲರ ಸೃಜನಶೀಲತೆಯ ವಿಕ್ಷಿಪ್ತತೆ, ಅಸಹಜತೆ ಹಾಗೂ ಅಸಲೀತನದ ಪ್ರತಿಭೆಯ ಅಭಿವ್ಯಕ್ತಿಯ ಗೆಲುವು ಕೂಡ. ಉದಾಹರಣೆಗೆ ಈಗಾಗಲೇ ಇವರನ್ನು ಕುರಿತು ಬರವಣಿಗೆಯ ಮೂಲಕ ದಾಖಲೆಗೊಂಡಿರುವ ಕೆಲವು ಪೂರ್ವಗ್ರಹ ಪರಿಕಲ್ಪನೆಗಳನ್ನು ಗಮನಿಸಿ. ‘ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಗೆ ಸೇರಲು ಪಾಟೀಲರು ಬಂದಾಗ, ತರಗತಿಗಳು ಅದಾಗಲೇ ಆರಂಭವಾಗಿಬಿಟ್ಟಿದ್ದವು. ಆದ್ದರಿಂದ ಅವರು ಕನ್ನಡಿಗ ದಂಡಾವತಿಮಠ ಅವರ ನೂತನ ಕಲಾಮಂದಿರವನ್ನು ಸೇರಿದರು’ ಎಂಬ ಪುನರಾವರ್ತನೆಗೊಳ್ಳುವ ವಾಕ್ಯವನ್ನು ಗಮನಿಸಿ. ಮುಂಬಯಿಯ ನೂತನ್ ಕಲಾಶಾಲೆ ಬಡವರ ಜೆ.ಜೆ. ಕಲಾಶಾಲೆ ಇದ್ದಂತೆ. ಅಲ್ಲಿ ಕಲಿತು ಇಲ್ಲಿ ಪರೀಕ್ಷೆ ಬರೆದ ಕರ್ನಾಟಕದ ಬಹುಪಾಲು ಕಲಾವಿದರು ಜೆ.ಜೆ.ಯಲ್ಲಿ ಕಲಿತೆವೆಂದೇ ಹೇಳುವುದಕ್ಕೆ ಕಾರಣ ಕೂಡ ಬ್ರಾಂಡಿಂಗ್ ಪ್ರಭಾವಕ್ಕೆ ತಲೆಬಾಗಿದವರೇ.

★★★



ಎಂ.ಬಿ. ಪಾಟೀಲರು ಚಿತ್ರಿಸಿದ ಹಳ್ಳಿಯ ಮಹಿಳೆ